**ಸಾಕ್ಷಿದಾರರನ್ನು ಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು: 02.06.2026**

**ಪಾಟೀ ಸವಾಲು:-** ಶ್ರೀ ಜಿ.ಎನ್.ಆರ್ ಎದರುದಾರರ ಪರ ವಕೀಲರಿಂದ

ಅರ್ಜಿದಾರರು ನಿಮ್ಮ ವಿರುದ್ದ ಅಸಲು ದಾವಾ ನಂ 119/2015 ನ್ನು ಹಾಕಿದ್ದರು ಎಂದರೆ ಸರಿ. ಆ ದಾವೆಯಲ್ಲಿ ನಾನು ವಕೀಲರನ್ನು ನೇಮಕ ಮಾಡಿಕೊಂಡಿದ್ದೆ ಎಂದರೆ ಸರಿ. ದಾವಾ ಸ್ವತ್ತು ಮತ್ತು ನಮ್ಮ ಸ್ವತ್ತು 2015 ರಲ್ಲಿ ಖಾಲಿ ನಿವೇಶನ ಎಂದರೆ ಸಾಕ್ಷಿಯು ದಾವಾ ಸ್ವತ್ತಿನಲ್ಲಿ ಒಂದು ಹಳೇ ಮನೆ ಇತ್ತು, ನಮ್ಮದು ಖಾಲಿ ನಿವೇಶನ ಎಂದು ನುಡಿಯುತ್ತಾರೆ. ನಾನು 2014-2015 ರಲ್ಲಿ ನಮ್ಮ ನಿವೇಶನದಲ್ಲಿ ಮನೆ ಕಟ್ಟಲು ನಾನು ಪ್ರಾರಂಭಿಸಿರುತ್ತೇನೆ. ಮನೆ ಕಟ್ಟಲು ನಾನು 2014 ರಲ್ಲಿ ಪರವಾನಿಗೆ ಪಡೆದಿದ್ದೆ. ಸದರಿ ದಾಖಲೆಯನ್ನು ನನ್ನ ವಿಚಾರಣ ಕಾಲದಲ್ಲಿ ಹಾಜರು ಮಾಡಿರುವುದಿಲ್ಲ. ಅಸಲು ದಾವಾ ನಂ. 119/2015 ಕ್ಕೆ ದಾವಾ ಸ್ವತ್ತಿಗೆ ತಂಟೆ ತಕರಾರು ಮಾಡದಂತೆ ದಿಃ 18.04.2015 ರಂದು ಆದೇಶವಾಗಿತ್ತು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಸದರಿ ಮಧ್ಯಂತರ ಅರ್ಜಿಗೆ ವಕೀಲರ ಮೂಲಕ ತಕರಾರನ್ನು ಸಲ್ಲಿಸಿದ್ದೆ ಎಂದರೆ ಸರಿ. ನನ್ನ ತಕರಾರಿನಲ್ಲಿ ಗುಣಅವಗುಣಗಳನ್ನು ಪರಿಗಣಿಸಿ ದಾವಾ ಸ್ವತ್ತಿಗೆ ಯಾವುದೇ ತಂಟೆ ತಕರಾರು ಮಾಡದಂತೆ ನ್ಯಾಯಾಲಯ ಆದೇಶ ಮಾಡಿತ್ತು ಎಂದರೆ ಸರಿ. ಆದರೂ ಸಹ ನಾನು ಆದೇಶವನ್ನು ಉಲ್ಲಂಘನೆ ಮಾಡಿ ರಾತ್ರಿ ಸಮಯದಲ್ಲಿ ಮನೆ ಕಟ್ಟಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಜಾಗದಲ್ಲಿ ಮನೆ ಕಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ಆ ಸಂಬಂಧ ಅರ್ಜಿದಾರರು ಪೊಲೀಸ್ ಠಾಣೆಗೆ, ಪುರಸಭೆರವರಿಗೆ ದೂರು ನೀಡಿದ್ದರು ಎಂದರೆ ಸಾಕ್ಷಿಯು ನಮಗೆ ತೊಂದರೆ ಕೊಡಲು ದೂರು ನೀಡಿದ್ದರು ಎಂದು ನುಡಿಯುತ್ತಾರೆ. ಆಗ ಪುರಸಭೆ ಅಧಿಕಾರಿಗಳು ಸ್ಥಳಕ್ಕೆ ಬಂದಿದ್ದರು ಎಂದರೆ ಸರಿ. ನ್ಯಾಯಾಲಯದಲ್ಲಿ ಆದೇಶವಿರುದರಿಂದ ಕಟ್ಟಡಕಟ್ಟದಂತೆ ಪುರಸಭ ಅಧಿಕಾರಿಗಳು ನನಗೆ ಹೇಳಿದ್ದರು ಸಹ ರಾತ್ರಿ ಮನೆ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಅಸಲು ದಾವಾ ನಂ. 119/2015 ಈಗಲೂ 3ನೇ ಹೆಚ್ಚುವರಿ ನ್ಯಾಯಾಲಯದಲ್ಲಿ ನಡೆಯುತ್ತಿದ್ದೆ ಎಂದರೆ ಸರಿ. ಸದರಿ ಕೇಸ್ ನಲ್ಲಿ ಮಧ್ಯಾಕಾಲೀನ ಅರ್ಜಿಯನ್ನು ಸಲ್ಲಿಸಿ ನಾನು ಒತ್ತುವರಿ ಮಾಡಿ ಮನೆ ಕಟ್ಟಿರುವ ಬಗ್ಗೆ PWD ಅಧಿಕಾರಿಯವರು ವರದಿ ನೀಡುವಂತೆ ಆದೇಶ ಆಗಿರುತ್ತದೆ ಎಂದರೆ ಸರಿ. ಸದರಿಯವರು ನನಗೆ ನೋಟಿಸ್ ನೀಡಿ ಸ್ಥಳ ತನಿಖೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕೇಸ್ ನಲ್ಲಿ ಪೂರ್ವ ಪಶ್ಚಿಮಃ 25 ಅಡಿ 4 ಇಂಚು, ಉತ್ತರ ದಕ್ಷಿಣಃ 6 ಅಡಿ 8 ಇಂಚು ಜಾಸ್ತಿ ಕಟ್ಟಡವನ್ನು ನಾನು ಕಟ್ಟಿಕೊಂಡಿರುತ್ತೇನೆ ಎಂದು ವರದಿ ನೀಡಿರುತ್ತಾರೆ ಎಂದರೆ ಸಾಕ್ಷಿಯು

ಬಾಗೂರು ರಸ್ತೆ 15 ಅಡಿ ಹೋಗಿರುತ್ತದೆ ಎಂದು ನುಡಿಯುತ್ತಾರೆ, ಸದರಿ 15 ಅಡಿಯನ್ನು PWD ಇಲಾಖೆಯವರು ಕಳೆದಿರುವುದಿಲ್ಲ ಎಂದು ನುಡಿಯುತ್ತಾರೆ. ಈ ರೀತಿ ಬಾಗೂರು ರಸ್ತೆಗೆ ಹೋಗಿದ್ದರೆ ಸದರಿ ವಿಚಾರವನ್ನು ತಮ್ಮ ವರದಿಯಲ್ಲಿ ತಿಳಿಸುತ್ತಿದ್ದರು ಎಂದರೆ ಸರಿಯಲ್ಲ. ಹಾಗಾಗಿ ಅಸಲು ದಾವಾ ನಂ. 119/2015 ರಲ್ಲಿ ಮಧ್ಯಕಾಲೀನ ಆದೇಶವನ್ನು ಉಲ್ಲಂಘನೆ ಮಾಡಿ ವಿನಃ ಕಾರಣ ಅರ್ಜಿದಾರರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ